ಓ.ಎಸ್.ನಂ.274/2016

ಪಿ ಡಬ್ಲ್ಯೂ : 1

ದಿನಾಂಕ 28-11-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ ಆರ್ ಹೆಚ್ ವಕೀಲರಿಂದಃ

ನಿಡಿ-2 ರಲ್ಲಿ ಕಾಣುವಂತೆ ಪ್ಲಾಟ್ ನಂ.1, 2 ರ ಸುತ್ತಲೂ ರಸ್ತೆ ಇದೆ ಎಂದರೆ ಸರಿ. ನೀವು ವಾಸಿಸುವ ಮನೆಯ ಪೂರ್ವ, ಉತ್ತರ ದಿಕ್ಕಿನಲ್ಲಿ ರಸ್ತೆ ಇದೆ ಎಂದರೆ ಸರಿ. ನಾನು ನಿವೇಶನ ಸಂಖ್ಯೆ 46 ರಲ್ಲಿ ವಾಸ ಇದ್ದೇನೆ ಎಂದರೆ ಸರಿ. ನಿಮ್ಮ ಮನೆಯ ಪಶ್ಚಿಮಕ್ಕೆ ಚರಂಡಿ ಇದೆ ಎಂದರೆ ಸರಿ. ನಂತರದಲ್ಲಿ ಖಾಲಿ ಜಾಗ ಇದೆ ಎಂದರೆ ಸರಿ. ನಿಡಿ-2 ರಲ್ಲಿ ನಿವೇಶನ ಸಂಖ್ಯೆ 1 ರ ಎದುರಿನಲ್ಲಿ ರಸ್ತೆ ತೋರಿಸಿದ್ದಾರೆ ಎಂದರೆ ಸರಿ. ಸದರಿ ರಸ್ತೆ ಅಸ್ಥಿತ್ವದಲ್ಲಿದೆ ಎಂದರೆ ಸರಿ. ನಿಡಿ-2 ರಲ್ಲಿ ನಮೂದಿಸಿರುವ ನಿವೇಶನ ಸಂಖ್ಯೆ 1 ರ •ಯಾವ ದಿಕ್ಕಿಗೆ ನಿಮ್ಮ ವಾಸದ ಮನೆ ಇದೆ ಎಂದರೆ ಗೊತ್ತಿಲ್ಲ. ನಿಪಿ-1, ನಿಡಿ-1 ರಲ್ಲಿರುವ ಚಕ್ಕುಬಂದಿಯ ಬಗ್ಗೆ ಮಾಹಿತಿ ಇದೆ. ನಿವೇಶನ ಸಂಖೆ 46 ರ ದಕ್ಷಿಣಕ್ಕೆ ನಿವೇಶನ ಸಂಖ್ಯೆ 47 ಎಂದು ತೋರಿಸಿದ್ದಾರೆ. ಸರ್ವೆ ನಂ.892/1 ರ ಜಮೀನಿನಲ್ಲಿ ನಿವೇಶನಗಳನ್ನು ರಚಿಸಿದ್ದು, ಆ ಜಮೀನು ಭೂ ಪರಿವರ್ತನೆ •ಯಾದ ಆದೇಶವನ್ನು ನೋಡಿಲ್ಲ. ಸದರಿ ಲೇಔಟ್ ನ ಅನುಮೋದಿತ ನಕ್ಷೆ (ಕೆ ಜೆ ಪಿ) ನೋಡಿಲ್ಲ. ಸದರಿ ದಾಖಲೆಯನ್ನು ಪಡೆದುಕೊಳ್ಳಲು ಈ ದಿನದವರೆಗೂ ಪ್ರಯತ್ನಿಸಿಲ್ಲ. ಸಾಮಾನ್ಯವಾಗಿ ಕೆ ಜೆ ಪಿ ಎಂಬ ದಾಖಲೆ ಇಲ್ಲದ ಲೆಔಟ್‌ನ ನಿವೇಶನಗಳನ್ನು ಅಳತೆ ಮಾಡಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಕೆಜೆಪಿಯ ದೃಢೀಕೃತ ನಕಲನ್ನು ತೋರಿಸಿ ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ಅಭಿಮುಖವಾಗಿ ನಿಡಿ-3 ಎಂದು ಗುರುತಿಸಲಾಯಿತು. ಸರ್ವೆ ನಂ.892/1 ರ ಜಮೀನಿನ ಸಂಬಂಧ ನಿಡಿ-3 ರಂತಹ ದಾಖಲೆ ಅಸ್ಥಿತ್ವದಲ್ಲಿಲ್ಲ ಎಂದರೆ ಸರಿ.

ಪ್ರತಿವಾದಿ ನಿವೇಶನ ಸಂಖ್ಯೆ 1, 2 ರ ಅಳತೆ ಮಾಡಿಸಿಲ್ಲ. ಅದರ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ವಿಚಾರವನ್ನು ವಾದ ಪತ್ರದಲ್ಲಿ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿದ್ದಾರೋ ಇಲ್ಲವೋ ಎಂಬ ವಿಚಾರ ಗೊತ್ತಿಲ್ಲ. ನಿವೇಶನ ಸಂಖ್ಯೆ 46 ಎದುರಿಗೆ ಸರ್ವೆನಂ.892/1 ರ ಸರ್ವೆ ನಂಬರಿನಲ್ಲಿ ರಚಿಸಿದ ನಿವೇಶನ ಸಂಖ್ಯೆ 53 ಇದೆ ಎಂದರೆ ಗೊತ್ತಿಲ್ಲ. ಸದರಿ ನಿವೇಶನಗಳು ಎದುರು ಬದುರುನಲ್ಲಿವೆ ಎಂದರೆ ಗೊತ್ತಿಲ್ಲ. ಸರ್ವೆ ನಂ.892/1 ರಲ್ಲಿ ರಚಿಸಿರುವ ಲೇಔಟನ್ನು ನೋಡಿದ್ದೇನೆ. ಸದರಿ ಲೇಔಟನ ದಕ್ಷಿಣದ ಭಾಗದಲ್ಲಿ ನಿವೇಶನಗಳು ಇವೆ ಎಂದರೆ ಸರಿ. ಸದರಿ ನಿವೇಶನಗಳ ಮಧ್ಯ ರಸ್ತೆ ಇದೆ ಎಂದರೆ ಸರಿ. ಸರ್ವೇ ನಂ.892/1 ರ ಉತ್ತರಕ್ಕೆ ರಾಷ್ಟ್ರಿಯ ಹೆದ್ದಾರಿ ಇದ್ದು, ಸದರಿ ಹೆದ್ದಾರಿಯ ದಕ್ಷಿಣದ ಕೊನೆಯಲ್ಲಿ ನಿವೇಶನ ಸಂಖ್ಯೆ

46, ಅದರ ಎದುರಿಗೆ ನಿವೇಶನ ಸಂಖ್ಯೆ 53 ಇದೆ ಎಂದರೆ ಗೊತ್ತಿಲ್ಲ. ಸರ್ವೆ ನಂ.892/1 ರಲ್ಲಿ ರಚಿಸಿರುವ ನೀವೇಶನಗಳ ಅಳತೆ ಸರಿಯಾಗಿಲ್ಲ ಎಂಬ ಕಾರಣಕ್ಕೆ ಹಲವಾರು ಸಿವಿಲ್ ವ್ಯಾಜ್ಯಗಳಿವೆ ಎಂದರೆ ಗೊತ್ತಿಲ್ಲ. ತಾಂಬೆ, ಹಾಗೂ ಹುಸೇನ ರವರು ಓ ಎಸ್ ನಂ.150/2015 ರ ದಾವೆಯಲ್ಲಿ ಸದರಿ ವಿಚಾರವಾಗಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಅದು ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಗೊತ್ತಿಲ್ಲ. ನಮ್ಮ ಮನೆಯ ಬಡಾವಣೆಯ ಭಾವಚಿತ್ರಗಳನ್ನು ತೋರಿಸಿದರೆ ಗುರುತಿಸಬಲ್ಲೆ. ಸಾಗೆ ಒಂದು ಭಾವಚಿತ್ರವನ್ನು ತೋರಿಸಿ, ಅದರಲ್ಲಿ ನಿಮ್ಮ ಮನೆ, ಪ್ರತಿವಾದಿ ನಿಂತಿರುವುದು ಕಾಣಿಸುತ್ತಿದೆ ಎಂದು ಒಪ್ಪಿದ ಮೇರೆಗೆ ಅದನ್ನು ಅಭಿಮುಖವಾಗಿ ನಿಡಿ-4 ಎಂದು ಗುರುತಿಸಲಾಯಿತು, ನಿಡಿ-4 ರಲ್ಲಿ ಪ್ರತಿವಾದಿ ನಿಂತಿರುವುದು ನಿವೇಶನ ಸಂಖ್ಯೆ 1, ಅದರ ಎದುರಿಗೆ ರಸ್ತೆ ಕಾಣಿಸುತ್ತಿದೆ ಎಂದರೆ ಸರಿ. ಸರ್ವೆ ನಂ.892/1 ರಲ್ಲಿ ರಚನೆಯಾದ ಲೇಔಟ್ ಪ್ಲಾನ್ ಪಡೆಯಲು ಯಾವುದೇ ತೊಂದರೆ ಇಲ್ಲ.

ಸುಳ್ಳು ದಾವೆ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಡಿ-4 ರಲ್ಲಿ ಕಾಣುವ ನಿವೇಶನ ಸಂಖೆ 1 ನ್ನು ಪ್ರತಿವಾದಿ ಕ್ರಯ ಮಾಡಲು ಪ್ರಯತ್ನಿಸಿಲ್ಲ ಎಂದರೆ ಸರಿ. ನಿಡಿ-4 ರಲ್ಲಿ ಕಾಣುವ ನಿಮ್ಮ ಮನೆಯ ಪಕ್ಕ ಇರುವ ನಿವೇಶನವನ್ನು ಯಾರು ಕ್ರಯ ಮಾಡಿಕೊಳ್ಳಲು ಬಂದಿಲ್ಲ ಎಂದರೆ ಸಾಕ್ಷಿ ನಿವೇಶನ ಸಂಖ್ಯೆ 47 ನನಗೆ ಸೇರಿದ ಆಸ್ತಿ ಅದನ್ನು ಪ್ರತಿವಾದಿ ಮಾರಾಟ ಮಾಡಲು ಬಂದ ಕಾರಣ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ನಿಡಿ-4 ರಲ್ಲಿ ಪ್ರತಿವಾದಿ ನಿಂತಿರುವ ಜಾಗ ನಿವೇಶನ ಸಂಖ್ಯೆ 1 ಸದರಿ ನಿವೇಶನವನ್ನೆ ನನಗೆ ಸೇರಿದ ನಿವೇಶನ ಸಂಖ್ಯೆ 47 ಎಂದು ಹೇಳುತ್ತಿದ್ದೀರಿ ಎಂದರೆ ಸರಿ. ನೀವು ಸಲ್ಲಿಸಿರುವ ದಾವೆಯಿಂದ ಪ್ರತಿವಾದಿಗೆ ಆರ್ಥಿಕ ಹಾಗೂ ದೈಹಿಕ ಸಮಸ್ಯೆ ಆಗಿದೆ ಎಂದರೆ ಸಾಕ್ಷಿ ನನ್ನ ಸ್ವತ್ತಿಗೆ ನಾನು ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನೀವು ಪ್ರತಿವಾದಿಗೆ ನಷ್ಟ ಭರಿಸಲು ಭಾದ್ಯಸ್ಥರು ಎಂದರೆ ಸರಿಯಲ್ಲ. ದಾವೆ ಪರಿಹಾರಕ್ಕೆ ನೀವು ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.